ದಿನಾಂಕ 22.6.2022 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಆರ್.ಎಸ್.ಎ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರವನ್ನು ಯಾವ ವಿಚಾರವಾಗಿ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತು . ನನ್ನ ತಂದೆಗೆ ವಯಸ್ಸಾಗಿದ್ದು, ನಡೆಯಲು ಆಗುವುದಿಲ್ಲ, ಮಾತನಾಡುತ್ತಾರೆ. ದಾವೆ ಹಾಕಲು ನನ್ನ ತಂದೆಯವರು ಮಾಹಿತಿ ನೀಡಿರುತ್ತಾರೆ. ಪ್ರತಿವಾದಿಯು ಮನೆಗೆ ಬಂದು ಜಾಗ ಮನೆ ಬೇಕು ಎಂದು ಸಿಕ್ಕಾಪಟ್ಟೆ ಜಗಳ ಮಾಡಿದ ನಂತರ ದಾವೆ ಹಾಕಿದ್ದಾರೆ. ಜಾಗದ ಸ.ನಂಃ 19/3 ಆಗಿರುತ್ತದೆ. ಸ.ನಂಃ 19/3 ರಲ್ಲಿ ಎಂದು ಮನೆ ಇರುತ್ತದೆ. ನಾವು 5 ಮಂದಿ ಮಕ್ಕಳು. ಇಬ್ಬರು ಗಂಡು 3 ಜನ ಹೆಣ್ಣು ಮಕ್ಕಳು. ನನ್ನ ತಂದೆ ಒಬ್ಬರೇ ಇರುವ ಕಾರಣ ಅವರನ್ನು ನೋಡಿಕೊಂಡು ಇಲ್ಲೇ ಇದ್ದೇನೆ. ನನ್ನ ತಾಯಿ ಮರಣ ಹೊಂದಿ 5 ವರ್ಷಗಳಾಗಿರುತ್ತದೆ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ತಂದೆ ದೊಡ್ಡ ಮಗನ ಮನೆಯಲ್ಲಿ ಇದ್ದಾರೆ ಎಂದರೆ ಸುಳ್ಳು. ನನ್ನ ತಂದೆ ಮನೆಗೂ ಸುಂದರ ರವರ ಮನೆಗೂ ಎಷ್ಟು ದೂರ ಇದೆ ಎಂದರೆ ಸ್ವಲ್ಪ ಇರುತ್ತದೆ. ಪಾಲು ಮಾಡಿದ ಅದೇ ಜಾಗದಲ್ಲಿ ಸುಂದರರವರ ಮನೆ ಇರುತ್ತದೆ. ಎರಡೂ ಮನೆಗಳು ಪಕ್ಕ ಪಕ್ಕ ಇರುವುದಿಲ್ಲ. ಪ್ರತಿವಾದಿಯ ಗಂಡನಿಗೂ ಸಹ ಪಾಲನ್ನು ಕೊಟ್ಟಿದ್ದು ಅವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆ ಇರುವ ಮನೆ ಸಂಃ H-1-188. ಯಾವ ವರ್ಷದಲ್ಲಿ ಪಾಲು ಪಟ್ಟಿ ಆಯಿತು ಎಂದು ನನಗೆ ನೆನಪಿಲ್ಲ. ಪ್ರತಿವಾದಿಯು ಸತೀಶ್ ರವರನ್ನು ಯಾವಾಗ ಮದುವೆಯಾಗಿರುತ್ತಾರೆ ಎಂದು ನನಗೆ ನೆನಪಿಲ್ಲ. ಪ್ರತಿವಾದಿ ಮದುವೆಯಾಗಿ 17 ವರ್ಷ ಆಗಿರುತ್ತದೆ. ಮದುವೆಯಾದ ನಂತರ ಪ್ರತಿವಾದಿಯು ನನ್ನ ತಂದೆಯ ಮನೆಯಲ್ಲಿ 1 - 1½ ವರ್ಷ ವಾಸವಾಗಿದ್ದರು. ಮದುವೆಯಾಗಿ 13 ವರ್ಷಗಳ ಕಾಲ ಪ್ರತಿವಾದಿಯು ನನ್ನ ತಂದೆಯ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ತಮ್ಮ ಸತೀಶನ ಮೇಲೆ ಜೀವನಾಂಶ ಕೋರಿ ಪ್ರಕರಣ ದಾಖಲಿಸಿರುವುದು ನನಗೆ ನೆನಪಿಲ್ಲ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ತಂದೆ ಅವರ ದೊಡ್ಡ ಮಗನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಾನು ಕೂಡ ನನ್ನ ಗಂಡನ ಮನೆಯಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆಗೆ ಹೋಗುತ್ತಾ ಬರುತ್ತಾ ಇದ್ದೇನೆ. ಈಗ ನಾನು ನನ್ನ ತಂದೆಯ ಜೊತೆಯಲ್ಲಿ ಇದ್ದೇನೆ. ನಾನು ನನ್ನ ಗಂಡನ ಮನೆಗೆ ಹೋಗುತ್ತಾ ಬರುತ್ತಾ ಇದ್ದಾಗ ನನ್ನ ತಂದೆಯವರನ್ನು ಪಕ್ಕದ ಮನೆಯವರು ನೋಡಿಕೊಳ್ಳುತ್ತಾರೆ. ನನ್ನ ತಂದೆಯ ತಮ್ಮ ನನ್ನ ತಂದೆಯವರನ್ನು ನೋಡಿ ಕೊಳ್ಳುತ್ತಾರೆ. ಅವರ ಹೆಸರು

ಚೆನ್ನಪ್ಪ ಎಂದು. ನನ್ನ ತಂದೆಯವರನ್ನು ನಾನು ಒಬ್ಬಳೇ ನೋಡಿಕೊಳ್ಳುತ್ತಿದ್ದೇನೆ. ನನ್ನ ತಂದೆಯವರನ್ನು ನೋಡಿಕೊಳ್ಳಲು ಬೇರೆ ಕೆಲಸದವರು ಇರುವುದಿಲ್ಲ.

ನಮ್ಮ ಮನೆಯಲ್ಲಿ ಶೀಲ ಎಂಬ ಹೆಂಗಸು ಇರುವುದಿಲ್ಲ ನನ್ನ ತಂದೆಯನ್ನು ನಾನೇ ನೋಡಿಕೊಳ್ಳುತ್ತೇನೆ. ನಾನು ನನ್ನ ತಂದೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಶೀಲ ಎಂಬ ಹೆಂಗಸನ್ನು ನನ್ನ ಸಹೋದರ ಮದುವೆಯಾಗಿ ನನ್ನ ತಂದೆಯ ಜೊತೆಯಲ್ಲಿ ಇರಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ವಿಚ್ಚೇದನ ನೀಡದೇ ಬೇರೆಯವರನ್ನು ಮದುವೆಯಾಗಿದ್ದಾರೆ ಎಂದು ಪ್ರತಿವಾದಿಯು ನಮ್ಮ ಮೇಲೆ ಪ್ರಕರಣ ದಾಖಲಿಸಿದ್ದಾರೆ ಹಾಗೂ ಸದರಿ ಪ್ರಕರಣದಲ್ಲಿ ನಾನೂ ಕೂಡ ಆರೋಪಿ ಎಂದರೆ ಸರಿ.

ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಸ್ವಂತ ವ್ಯವಹಾರ ಮಾಡುತ್ತಿದ್ದು ಅವರಿಗೆ ಆದಾಯ ಇದೆ ಎಂದು ತಿಳಿಸಿದ್ದೇನೆ ಎಂದರೆ ಸರಿ. ಆದಾಯ ಇದೆ ಎಂದು ತೋರಿಸಲು ಯಾವುದಾದರೂ ದಾಖಲೆ ನೀಡಿದ್ದೀರಾ ಎಂದರೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ನನ್ನ ತಂದೆಯವರು ನನ್ನ ಸಹೋದರನ ಮನೆಯಲ್ಲಿದ್ದು, ಪ್ರತಿವಾದಿಯ ಗಂಡ ಬೇರೆಯವನ್ನು ಮದುವೆಯಾಗಿ ನನ್ನ ತಂದೆ ಇದ್ದ ಮನೆಯಲ್ಲಿ ಇರಿಸಿರುವ ವಿಚಾರವನ್ನು ಮರೆಮಾಚಲು ಪ್ರತಿವಾದಿಯ ವಿರುದ್ಧ ಪ್ರಸ್ತುತ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಗಂಡು ಮಕ್ಕಳು ನನ್ನ ತಂದೆಯನ್ನು ನೋಡಿ ಕೊಳ್ಳದ ಕಾರಣ ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿ. ಪ್ರತಿವಾದಿಯ ಗಂಡ ನ್ನನ ತಂದೆಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ಹೇಳಿ ಅ ಕಾರಣ ಜೀವನಾಂಶ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ತಂದೆಯನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳುತ್ತಾರೆ. ನನ್ನ ತಂದೆಗೂ ಪ್ರತಿವಾದಿಗೂ ಒಳ್ಳೆಯ ಸಂಬಂಧ ಇದ್ದು ಅವರಿಗೆ ಪ್ರತಿವಾದಿಯ ಮೇಲೆ ಯಾವುದೇ ಆಕ್ಷೇಪ ಇಲ್ಲ ಎಂದರೆ ಪ್ರತಿವಾದಿಯು ತುಂಬಾ ಗಲಾಟೆ ಮಾಡಿ ಬೈದು ಮನೆ ನನಗೆ ಬೇಕು ಎಂದು ಗಲಾಟೆ ಮಾಡಿದ್ದಾರೆ ಎಂದು ಹೇಳುತ್ತಾರೆ.

ಪ್ರತಿವಾದಿಯು ನನ್ನ ತಂದೆಯ ಜೊತೆ ವಾಸ ಮಾಡಿಕೊಳ್ಳಲು ಮನವಿ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಗಲಾಟೆ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ಪ್ರತಿವಾದಿಯು ಯಾವುದೇ ಗಲಾಟೆ ಮಾಡಿಲ್ಲ ಮತ್ತು ಯಾವುದೇ ಬಾಗಿಲನ್ನು ಹೊಡೆದಿಲ್ಲ ಎಂದರೆ ಸರಿಯಲ್ಲ. ಅವರ ತಂದೆ ಮತ್ತು ಅವರು ಗಲಾಟೆ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಮ್ಮ ಮತ್ತು ಆತನ 2 ನೇ ಹೆಂಡತಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿ ನನ್ನ ತಮ್ಮ 2 ನೇ ಮದುವೆಯಾಗಿಲ್ಲ ಎಂದು ಹೇಳುತ್ತಾರೆ. ನನ್ನ ತಮ್ಮ ಮಾಡಿದ ತಪ್ಪನ್ನು ಮುಚ್ಚಿ ಹಾಕಲು ನಾನು ನನ್ನ ಗಂಡನ ಮನೆಯಲ್ಲಿದ್ದರೂ ಸಹ ನನ್ನ ತಂದೆಯ ಮನೆಯಲ್ಲಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇರುವ ಕಾರಣ ನನ್ನ ತಂದೆಯಿಂದ ಅಧಿಕಾರ ಪತ್ರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ

ಗಂಡನ ಜೊತೆಯಲ್ಲಿ ಹೆಂಡತಿ ಇರುತ್ತಾರೆ ಎಂದರೆ ಸರಿ. ಆದರೆ ಸಾಕ್ಷಿಯು ತಂದೆಯನ್ನು ಸಹ ನೋಡಿಕೊಳ್ಳಬೇಕು ಎಂದು ಹೇಳುತ್ತಾರೆ. ನನ್ನ ತಮ್ಮ 2 ನೇ ಮದುವೆಯಾಗಿ ಆಕೆಯನ್ನು ನನ್ನ ತಂದೆಯ ಮನೆಯಲ್ಲಿರಿಸಿ ಆ ತಪ್ಪನ್ನು ಮುಚ್ಚಿ ಹಾಕಲು ನಮ್ಮಿಂದ ದಾವೆ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಮನೆಯಲ್ಲಿ ಪ್ರತಿವಾದಿಗೆ ಮಾತ್ರ ಅವಕಾಶ ಇದ್ದು ಬೇರೆಯಾರಿಗೂ ಅವಕಾಶ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ